**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂಃ 658/2018
ಸಿಡಬ್ಲ್ಯೂ 1 ಪಿಡಬ್ಲ್ಯೂ 3

| | |
|---|---|
| ಸಾಕ್ಷಿದಾರರ ಹೆಸರು | ಅಬ್ದುಲಭಾಷಾ ಕೀಜಿ |
| ತಂದೆ/ಗಂಡನ ಹೆಸರು | ಅಮೀನಸಾಬ |
| ವಯಸ್ಸು | 39 ವರ್ಷ |
| ಉದ್ಯೋಗ | ಪಂಚಾಯಿತ ಅಭಿವೃಧ್ಧಿಕಾರಿಗಳು ಬೇನಾಳ ಗ್ರಾಮ ಪಂಚಾಯಿತಿ |
| ವಾಸಸ್ಥಳ | ಮಮದಾಪೂರ, ಬಬಲೇಶ್ವರ ತಾಲೂಕ |

**ಸಾಕ್ಷಿಯನ್ನು ಇಂದು ದಿನಾಂಕಃ 06.04.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

**1.** ನಾನು **2016** ರಿಂದ **2018** ರವರೆಗೆ ಹಣಮಾಪೂರ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ದಿ ಅಧಿಕಾರಿ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ಮಟ್ಟಿಹಾಳ ಗ್ರಾಮವು ಹಣಮಾಪೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ.

**2.** ದಿನಾಂಕ. **27.08.2017** ರಂದು ಬೆಳಿಗ್ಗೆ **4.00** ಗಂಟೆಗೆ ನಾನು ನಮ್ಮ ಮನೆಯಲ್ಲಿ ಇದ್ದಾಗ ನಮ್ಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮಟ್ಟಿಹಾಳ ಕ್ರಾಸದಲ್ಲಿ ಮಟ್ಟಿಹಾಳ ಗ್ರಾಮದ ಕೆಲವು ದಲಿತ ಸಮುದಾಯದ ಜನರು ಕೂಡಿಕೊಂಡು ಕ್ರಾಸ ಮಧ್ಯದಲ್ಲಿ ಹಾಯ್ದು ಹೋಗಿರುವ ರಾಜ್ಯ ಹೆದ್ದಾರಿಯ ಮಧ್ಯದಲ್ಲಿ ದ್ವಜ ಕಟ್ಟೆಯನ್ನು ಕಟ್ಟಿ ನೀಲಿ ದ್ವಜವನ್ನು ಹಾರಿಸಿರುತ್ತಾರೆ ಎಂದು

ಮಾಹಿತಿ ಬಂದಿರುತ್ತದೆ. ನಂತರ ನಾನು ಕೂಡಲೇ ಸ್ಥಳಕ್ಕೆ ಹೋಗಿ ನೋಡಲಾಗಿ ಸುಮಾರು **30** ರಿಂದ **35** ಜನರು ಗುಂಪು ಕಟ್ಟಿಕೊಂಡು ನಿಂತಿದ್ದರು. ನಂತರ ನಾನು ಅವರಿಗೆ ದ್ವಜದ ಕಟ್ಟೆಯನ್ನು ಅಕ್ರಮವಾಗಿ ಕಟ್ಟಿರುವುದರಿಂದ ಸದರಿ ದ್ವಜ ಕಟ್ಟೆಯನ್ನು ತೆರವುಗೊಳಿಸುವಂತೆ ತಿಳಿ ಹೇಳಿದಾಗ ಅವರು ನಮಗೆ ಅಸಭ್ಯವಾಗಿ ವರ್ತಿಸಿರುತ್ತಾರೆ. ನಂತರ ನಾನು ಈ ಕುರಿತು ಬಸವನ ಬಾಗೇವಾಡಿಯ ತಹಶೀಲ್ದಾರವರಾದ ಚಾಸಾ**-16** ರವರಿಗೆ ತಿಳಿಸಿರುತ್ತೇನೆ. ನಂತರ ಚಾಸಾ **-16** ರವರು ಸ್ಥಳಕ್ಕೆ ಬಂದು ಆರೋಪಿತರಿಗೆ ತಿಳಿಸಿ ಹೇಳಿದಾಗ್ಯೂ ಕೂಡಾ ಅವರ ಮಾತಿಗೂ ಕೂಡಾ ಆರೋಪಿತರು ಬೆಲೆ ಕೊಟ್ಟಿರುವುದಿಲ್ಲ. ನಂತರ ನಾವುಗಳು ಪಂಚಾಯತಿಯ ಸಿಬ್ಬಂದಿಯವರ ಸಹಾಯದಿಂದ ದ್ವಜದ ಕಟ್ಟೆಯನ್ನು ತೆರವುಗೊಳಿಸಿರುತ್ತೇವೆ.

3. ಈ ಕುರಿತು ನಾನು ಆರೋಪಿತರ ವಿರುದ್ದ ದೂರನ್ನು ನೀಡಿರುತ್ತೇವೆ ಸಾಕ್ಷಿ ದೂರನ್ನು ದೂರನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

4. ನಾನು ದೂರುಕೊಟ್ಟ ದಿನ ಪೋಲೀಸರು ಸ್ಥಳ ಮಹಜರಗೆ ಬಂದಿದ್ದು ನಾನು ಪೋಲಿಸರಿಗೆ ಸ್ಥಳ ತೋರಿಸಿದ್ದು ನಾನು ತೋರಿಸಿದಂತೆ ಪೋಲಿಸರು ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಸ್ಥಳ ಮಹಜರನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆರವರೆ ಜರುಗಿಸಿರುತ್ತಾರೆ. ಸಾಕ್ಷಿ ಸ್ಥಳ ಮಹಜರನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸ್ಥಳ ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿರುತ್ತಾರೆ.

5. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1, 3 ರಿಂದ 7, 9, 12, 14, 15, 17, 20 ರಿಂದ 22, 24 ರಿಂದ 26, 28 ರಿಂದ 33 ಮತ್ತು 36 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 2, 6, 10,

11, 18, 23, 27ನೇ ಆರೋಪಿತರು ಗೈರು ಹಾಜರು ಆಗಿದ್ದು ಸದರಿ ಆರೋಪಿತರ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ. 8 ಮತ್ತು 16ನೇ ಆರೋಪಿತರು ಈ ಪ್ರಕರಣದಿಂದ ಪ್ರತ್ಯೇಕಿಸಲ್ಪಟ್ಟಿರುತ್ತಾರೆ. 13, 34 ಮತ್ತು 35ನೇ ಆರೋಪಿತರು ಮೃತಪಟ್ಟಿರುತ್ತಾರೆ.

**<u>ಪಾಟೀ ಸವಾಲು:- 9, 20, 27, 31, 36ನೇ ಆರೋಪಿ ಪರ</u>**

**<u>ಶ್ರೀ.ಪಿ.ಎಮ್.ಕೆ. ವಕೀಲರಿಂದ</u>**

1. ನಾನು ಖಾಯಂ ಆಗಿ ಮಮದಾಪೂರ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಮಮದಾಪೂರ ಗ್ರಾಮದಿಂದ ಮಟ್ಟಿಹಾಳ ಗ್ರಾಮಕ್ಕೆ ಬಂದು ಹೋಗುವುದು ಮಾಡುತ್ತೇನೆ ಎಂದರೆ ಸರಿ. ನಿಪಿ-2ರ ದೂರಿನಲ್ಲಿ ನಾನು ಆ ದಿನ ಮನೆಯಲ್ಲಿ ಇದ್ದೆ ಎಂದು ಮಾತ್ರ ಬರೆಯಿಸಿರುತ್ತೇನೆ ಹೊರತು ಮಮದಾಪೂರ ಗ್ರಾಮದಲ್ಲಿರುವ ಮನೆಯಲ್ಲಿ ಇದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನನಗೆ ಮಾಹಿತಿಯು ಯಾರಿಂದ ಮತ್ತು ಹೇಗೆ ಬಂದಿರುತ್ತದೆ ಎಂಬುದರ ಬಗ್ಗೆ ನಿಪಿ-2ರ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಮಟ್ಟಿಹಾಳ ಕ್ರಾಸಕ್ಕೆ ಬಂದಾಗ ಬೆಳಿಗ್ಗೆ 4.00 ರಿಂದ 4.30 ಗಂಟೆ ಆಗಿತ್ತು. ನಾನು ಮಟ್ಟಿಹಾಳ ಕ್ರಾಸಕ್ಕೆ ಬಂದಾಗ ಬೆಳಿಗ್ಗೆ 4.00 ರಿಂದ 4.30 ಗಂಟೆ ಆಗಿತ್ತು ಎಂಬುದರ ಕುರಿತು ನಿಪಿ-2ರ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಹೇಳಿದಂತೆ ನಿಪಿ-2ರ ದೂರನ್ನು ಪೊಲೀಸರು ತಯಾರಿಸಿರುತ್ತಾರೆ. ನಿಪಿ-2ರ ದೂರನ್ನು ತಯಾರಿಸಿದ ಪೊಲೀಸರ ಹೆಸರು ನನಗೆ ನೆನಪಿಲ್ಲ. ನಿಪಿ-2ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

2. ನಾನು ಆ ದಿನ ಮಟ್ಟಿಹಾಳ ಕ್ರಾಸಕ್ಕೆ ಬಂದಾಗ ದ್ವಜದ ಕಟ್ಟೆಯನ್ನು ಪೂರ್ತಿಯಾಗಿ ಕಟ್ಟಿದ್ದರು. ಸದರಿ ಕಟ್ಟೆಯ ಉದ್ದ ಮತ್ತು ಅಗಲ ಎಷ್ಟು ಇತ್ತು ಎಂಬುದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ದ್ವಜ ಕಟ್ಟೆಯ ಛಾಯಾ ಚಿತ್ರವನ್ನು ತೆಗೆದಿರುವುದಿಲ್ಲ. ಸದರಿ ಬೆಳಿಗ್ಗೆ 4 ಗಂಟೆಯಿಂದ 4.30

ಗಂಟೆ ಸಮಯದಲ್ಲಿ ಕತ್ತಲು ಇತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಒಬ್ಬರ ಮುಖವನ್ನು ಒಬ್ಬರು ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಮಟ್ಟಿಹಾಳ ಕ್ರಾಸಗೆ ನಾನು ಒಬ್ಬನೇ ಹೋಗಿರುತ್ತೇನೆ ಎಂದರೆ ಸರಿ. ನಾನು ಮಟ್ಟಿಹಾಳ ಕ್ರಾಸಗೆ ಹೋಗುವ ಪೂರ್ವದಲ್ಲಿ ಬೇರೆ ಯಾವುದೇ ಅಧಿಕಾರಿಗಳು ಇರಲ್ಲಿಲ್ಲ ಎಂದರೆ ಸರಿ. ಆ ದಿನ ಚಾಸಾ-16 ರವರು ಬೆಳಿಗ್ಗೆ 5 ರಿಂದ 5.30 ಗಂಟೆಗೆ ಬಂದಿರುತ್ತಾರೆ. ನಾನು ಚಾಸಾ-16 ರವರಿಗೆ ಘಟನೆಯ ಬಗ್ಗೆ ತಿಳಿಸಿಲ್ಲ ಎಂದರೆ ಸರಿ.

3. ನಾನು ಕಟ್ಟಿಯನ್ನು ಕಟ್ಟಿರುವುದನ್ನು ಪ್ರತ್ಯೇಕ್ಷವಾಗಿ ನೋಡಿಲ್ಲ ಎಂದರೆ ಸರಿ. ಸದರಿ ಕಟ್ಟಿಯನ್ನು ನಾನೇ ನಮ್ಮ ಸಿಬ್ಬಂಧಿಗಳ ಮೂಲಕ ತೆರುವುಗೊಳಿಸಿರುತ್ತೇನೆ. ನಮ್ಮ ಸಿಬ್ಬಂಧಿಗಳು ಹೆಸರು ಮೈಬೂಬ ಮತ್ತು ವಿಠ್ಠಲರವರು ಇದ್ದರು. ಸದರಿ ಕಟ್ಟಿಯನ್ನು ನಾನು ಮೈಬೂಬ ಮತ್ತು ವಿಠ್ಠಲರವರ ಮೂಲಕ ತೆರವುಗೊಳಿಸಿರುವ ಬಗ್ಗೆ ನಿಪಿ-2 ರ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ಸಿಬ್ಬಂಧಿಗಳ ಮೂಲಕ ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

4. ಆ ದಿನ ಆರೋಪಿತರು ಬೆಳಿಗ್ಗೆ 6 ಗಂಟೆಗೆ ಮಟ್ಟಿಹಾಳ ಕ್ರಾಸದಿಂದ ಹೋಗಿರುತ್ತಾರೆ. 1 ನೇ ಆರೋಪಿಯು ನಮ್ಮ ಕಛೇರಿಗೆ ತನ್ನ ವೈಯಕ್ತಿಕ ಕೆಸಲಕ್ಕಾಗಿ ಬರುವುದು ಮತ್ತು ಹೋಗುವುದು ಮಾಡುತ್ತಾನೆ ಎಂದರೆ ಸರಿ. ಆ ಕಾರಣದಿಂದ 1 ನೇ ಆರೋಪಿಯ ಹೆಸರು ಗೊತ್ತಿರುತ್ತದೆ ಎಂದರೆ ಸರಿ. ಉಳಿದ ಆರೋಪಿತರ ತಂದೆಯ ಹೆಸರು ಮತ್ತು ಅವರ ವೈಯಕ್ತಿಕ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿತರು ನಾನು ಹೇಳಿದಂತೆ ಯಾವುದೇ ದ್ವಜದ ಕಟ್ಟಿಯನ್ನು ಕಟ್ಟದೇ ಇದ್ದರೂ ಕೂಡಾ ನಾನು ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ನಾನು ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನೊಂದಿಗೆ ಅಸಭ್ಯವಾಗಿ ವರ್ತಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ

ಒಂದೇ ಸಾರಿ ದಿನಾಂಕ:27.08.2017 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

5. ನನಗೆ ಮಹಜರ ಮಾಡಿದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1ರ ಮಹಜರನ್ನು ಪಿ.ಎಸ್.ಐರವರು ಬರೆದಿರುತ್ತಾರೆ. ಚಾಸಾ-2 ಮತ್ತು 3 ರವರು ಮಹಜರ ಬರೆಯಲು ಪೊಲೀಸರಿಗೆ ಮಾಹಿತಿ ಕೊಡದೇ ಇದ್ದರು ಕೂಡಾ ಮಾಹಿತಿ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- 9, 20, 27, 31, 36 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ಉಳಿದ ಆರೋಪಿತರ ಪರ ವಕೀಲರು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**